cheapest Daily 1 ಕಾಸು
ತಿಂಗಳಿಗೆ ವಾರಪತ್ರಿಕೆ ಸೇರಿ 4 ಆಣೆ.

Regd. No. M 1299 SATYAVADhi

ಸತ್ಯವಾದಿ

ಸಂಪುಟ 26] ಸೋಮವಾರ 21—12—1942 [ಸಂಚಿಕೆ 77

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಮುಗಿಸುವ ತನಕ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ವೀಪೀ ಚಾರ್ಜು 1 ಆಣೆ. ಮುಂಗಡ ಕಳುಹಿಸಬೇಕು
ಸತ್ಯವಾದಿ ಆಫೀಸ್ ಮೈಸೂರು.

ಅಕ್ಕಿಯನ್ನು ಕಡಮೆಯಾಗಿ ಉಪಯೋಗಿಸಿ

ಯುದ್ಧ ವಾರ್ತೆ

ಸ್ಟಾಲಿನ್ ಗ್ರಾಡಿನಲ್ಲಿ ರಷ್ಯನರು ಮುನ್ನುಗ್ಗುತ್ತಿದ್ದು 10 ಸಾವಿರಕ್ಕೆ ಮೇಲ್ಪಟ್ಟ ಜರ್ಮನರನ್ನು ಸೆರೆ ಹಿಡಿದು ಮದ್ದು ಗುಂಡು ಮುಂತಾದ್ದನ್ನು ವಶಪಡಿಸಿಕೊಂಡಿದ್ದಾರೆ.

ಟುನಿಸಿಯಾದಲ್ಲಿ ಭಾರಿ ಕದನ ನಿರೀಕ್ಷಿಸಲಾಗಿದೆ ಮಿತ್ರಮಂಡಲಿಯವರೂ ಶತ್ರುಪಕ್ಷದವರೂ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವರು.

ಡಾಕಾರಿನಲ್ಲಿದ್ದ ಫ್ರೆಂಚ್ ಯುದ್ಧ ಹಡಗುಗಳನ್ನು ಮಿತ್ರ ಮಂಡಲಿಯವರು ಆಗಲೇ ಉಪಯೋಗಿಸಿಕೊಳ್ಳುತ್ತಿರುವರೆಂದು ಅಡ್ಮಿರಲ್ ಕನ್ನಿಂಗ್ ಹ್ಯಾಮ್ ರವರು ಹೇಳಿಕೆ ಕೊಟ್ಟಿದ್ದಾರೆ.

ಬ್ರಿಟನ್ನಿನ ಮೇಲೆ ಶನಿವಾರ ದಾಳಿ ನಡೆಸಲು ಒಂದಿದ್ದ 43 ಜರ್ಮನ್ ವಿಮಾನ ಕ್ಯಾಪ್ಟನ್ಗಳು ಹೊಡೆದುರುಳಿಸಲ್ಪಟ್ಟಿವೆ

ಡರ್ಬ್ ತಿರುಗಣೆಯಲ್ಲಿ ರಷ್ಯನರು ಮುನ್ನುಗ್ಗುತ್ತ ಜರ್ಮನರ ರಿಕಾಣಿಯನ್ನು ಬೇಧಿಸಿರುತ್ತಾರೆ.

ಮೆಡಿಟರೇನಿಯನ್ನಿನಲ್ಲಿ ಇನ್ನೂ ಅನೇಕ ಶತ್ರು ಸರಬರಾಯಿ ಹಡಗುಗಳು ಮುಳುಗಿಸಲ್ಪಟ್ಟವು.

ಹೂಹ್ ನೊ ಹತ್ತಿರ ಚೈನೀಯರು ವಿಜಯಿಯಾಗುತ್ತಿದ್ದು ಜಪಾನರು ವಾಪಸ್ಸಾಗುತ್ತಿದ್ದಾರೆ.

ನೆಲ್ಲೂರಿನಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಮದ್ರಾಸ್ ಗ್ಯಾರ್ನರವರ ಅಡ್ವೈಸರಾದ ವಿ॥ ರುವರ್ ಫರ್ಡ್ರವರು, ಆಹಾರ ಸಾಮಗ್ರಿಗಳ ಬೆಲೆ ಏರದಂತಿರಲು ಸರ್ಕಾರದವರ ತುಂಬಾ ಪ್ರಯತ್ನಿಸುತ್ತಿರುವರೆಂದು ಭರವಸೆ ಇತ್ತರು. ಸಣ್ಣ ಚಿಲ್ಲರೆ ನಾಣ್ಯಗಳ ಅಭಾವ ವಿಷಯದಲ್ಲಿ ಅವನ್ನು ಶೇಖರಿಸಿ ಮುಚ್ಚಿಡುತ್ತಿರುವವರನ್ನು ಸರಕಾರದೊಂದಿಗೆ ಸಹಕರಿಸಿ, ಜನರನ್ನು ಕಂಡು ಹಿಡಿದು ಶಿಕ್ಷೆಪಡಿಸಬೇಕೆಂದೂ ಚಿಲ್ಲರೆ ಹಣ ಹೆಚ್ಚಿಗಿ ಚಲಾವಣೆ ಬರುವುದೆಂದೂ ತಿಳಿಸಿದರು. ಅಕ್ಕಿ ಖರೀದಿ ಹೆಚ್ಚದಿರಲು ಅದನ್ನು ಕಡಮೆಯಾಗಿ ಉಪಯೋಗಿಸಬೇಕೆಂದು ಸಲಹೆ ಇತ್ತರು.

ಮೈಸೂರು ಸಿಟಿ ಜಮಾಲ್ಮಠ ರಸ್ತೆಯಲ್ಲಿರುವ ಅರಕಲಗೂಡು ಕೃಷ್ಣ ಶ್ರೇಷ್ಠಿಯವರ ಕುಮಾರರಾದ ರಿಟೈರ್ಡ್ ಸಬ್ ರಿಜಿಸ್ಟ್ರಾರ್ ಎ, ಕೆ. ವೆಂಕಟರಮಣ ಶ್ರೇಷ್ಠಿಯವರು ಮೈಸೂರಿನಲ್ಲಿರುವ ಕಾವೇರಿಪಟ್ಟಣ ಸಬ್ಬಾಯಶೆಟ್ಟಿ, ಅಣ್ಣಯ್ಯ ಶೆಟ್ಟಿಯವರ ವಿದ್ಯಾರ್ಥಿನಿಲಯದ ಪುಸ್ತಕ ಭಂಡಾರಕ್ಕೆ 140 ಅಮೂಲ್ಯವಾದ ಆಂಗ್ಲ ಮತ್ತು ಕನ್ನಡ ಪುಸ್ತಕಗಳನ್ನು ದಾನ ಮಾಡಿದ್ದಾರೆಂದು ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ.

ಸ್ಪೇನ್ ಮೇರೆ ಜರ್ಮನಿ ದಂಡೆಯಾತ್ರೆ?

ಸ್ಪೇಯಿನಿನ ಮಾಜಿ ಪ್ರಧಾನರೂ ಮತ್ತು ವಿದೇಶಾಂಗ ಮಂತ್ರಿಯೂ ಆದ ಎಂ. ನೀಗ್ರಿನ್ ಅವರು ಜನರಲ್ ಈಸ್ಪೇನಾಹವರ್ ಒಡನೆ ಚರ್ಚೆ ನಡೆಸಿದರೆಂದು ಇದು ಸ್ಪೇಯನಿನ ಮೇಲೆ ಜರ್ಮನಿಯ ದಂಡಯಾತ್ರೆ ನಡೆಯುವ ಸಂದರ್ಭದ ವಿಚಾರವಿರಬಹುದೆಂದೂ ಊಹಿಸಲಾಗಿದೆ.

ಸ್ಪೇಯಿನ್ ಮತ್ತು ಪೋರ್ಚುಗಲ್ ಗಳು ತಟಸ್ಥರಾಗಿರಬೇಕೆಂದೂ ಪರಸ್ಪರ ಸೌಹಾರ್ದವನ್ನು ಸಾಧಿಸಬೇಕೆಂದೂ ಈ ದಕ್ಕಾಗಿ ಸ್ಪೇಯಿನ್ ವಿದೇಶಾಂಗ ಮಂತ್ರಿಯು ಪೋರ್ಚುಗಲ್ಲಿಗೆ ಬಂದಿರುವರೆಂದೂ ತಿಳಿಯಲಾಗಿದೆ.

ಉತ್ತರ ಆಫ್ರಿಕಾದಲ್ಲಿ ಎರಡೂ ಪಕ್ಷಗಳೂ ತಮ್ಮ ತಮ್ಮ ಸಾಧನಗಳನ್ನು ಮೆಡಿಟರೇನಿಯನ್-ಎಲ್-ಬಾಬಿಗೆ ಒದಗಿಸಿಕೊಳ್ಳುತ್ತಿದ್ದಾರೆ. ಇಟಲಿಯವರು ಟ್ಯೂನಿಸಿಯದೊಳಕ್ಕೆ ಸರಿಯುತ್ತಿದ್ದಾರೆ

ಶತ್ರುಗಳ ಸೈನ್ಯಗಳು ಟ್ರಿಪೋಲಿ ಪ್ರದೇಶದಲ್ಲಿ ಇನ್ನೂ ದೃಢವಾಗಿಯೇ ಇವೆ ಮಿತ್ರ ವೃಂದದವರು ಸುಮಾರು 50 ಮೈಲಿ ನಾಫಿಲಿಯ ಕಡೆಗೆ ಮುಂದುವರಿದಿದ್ದಾರೆ ಶತ್ರುಗಳ ಮೇಲೆ ಒಂದೇ ರೀತಿ ಒತ್ತಡವನ್ನು ಕೊಡಲಾಗುತ್ತಿದೆ.

ಮಯೂರಾ ಆರ್ಟಿಸ್ಟ್ಸ್ ಮೈಸೂರು
ಇವರು **22** ನೇ ತಾರೀ **ಮಂಗಳವಾರ**
ಟೌನ್ ಹಾಲಿನಲ್ಲಿ
ನಿರ್ಭಾಗ್ಯಭಾರತಿ ಅಥವಾ ಪತಿಭಕ್ತಿ
ಎಂಬ ನಾಟಕವನ್ನಾಡುವರು

ಸುದ್ದಿಗಳ ಸುರಿಮಳೆ

ದಕ್ಷಿಣ ಇಂಡಿಯಾದ ಒಂದು ಕಡೆ ಸಾವಿರಾರು ಸೈನಿಕರ ಸೈನ್ಯ ಶಿಕ್ಷಣ ನಡೆಯಿತು. ಜನರಲ್ ವೇವಲ್ಲರು ದಕ್ಷಿಣ ಹಿಂದೂಸ್ಥಾದದ ಸೈನಿಕರು ಯಾವ ರೀತಿ ತಯ್ಯಾರಾಗಿರುವರೆಂಬುದನ್ನು ಪರೀಕ್ಷಿಸಿ ಸಂತೋಷಪಟ್ಟರು.

ಬರ್ಮಾದಲ್ಲಿ ಅಕಯಾಂಟಿಗೆ ಉತ್ತರದಲ್ಲಿರುವ ಮಂಗಡಾ ಎಂಬ ಪಟ್ಟಣವನ್ನು ವಿಮಾನಮಂಡಲಿಯವರು ಜಪಾನರಿಂದ ಪುನಃ ಪಡೆದಿರುವರು. ಇದನ್ನು ನೋಡಿದರೆ ಜಪಾನಿಯವರಿಗೆ ಬರ್ಮಾದಲ್ಲಿ ಅಪಜಯ ಪ್ರಾರಂಭವಾಗಿದೆ

ಅಮೇರಿಕಾ ಸಂಸ್ಥಾನಕ್ಕೂ ಇಂಡಿಯಾಕ್ಕೂ ವ್ಯಾವಾರದ ಕೌಲು ನಡೆಯಿತು. ಇದರಿಂದ ಈ ದೇಶಗಳ ವ್ಯಾಪಾರಗಳಿಗೆ ಅನುಕೂಲವಾಯಿತು.

ಇದುವರಿಗೆ ಸಾಲಮೊ ಕದನದಲ್ಲಿ ಜಪಾನರ 640 ವಿಮಾನಗಳು ನಾಶಹೊಂದಿವೆ.

ಈಸ್ಟ್ ಗೋದಾವರಿಯ ಓಗಿರಿಲಾ ವೀರಭದ್ರರಾಯರು ಕೋಕೆನಾಡ ಸಬ್ ಕೋರ್ಟಿಗೆ ಒಂದು ಕಾಗದ ಬರೆದು, ತಮ್ಮ ಎರಡು ಕೇಸುಗಳಲ್ಲಿ ತಮ್ಮಂತೆ ಕೇಸನ್ನು ಫೈಸಲ್ ನಾಡಿಗಿದ್ದುದರಿಂದ ರೂ. 500 ನಷ್ಟ ಕೊಡಬೇಕೆಂದು ಇತ್ಯಾದಿ ಬರೆದರೆಂದು ಮದಸಾಸು ಹೈ ಕೋರ್ಟಿನವರು ರೂ. ಜುಲ್ಮಾನೆ ವಿಧಿಸಿರುವರು.

ಈಚೆಗೆ ಅಂದರೆ 3-4 ದಿನಗಳಿಂದ ಬೆಳ್ಳಿಯ ಮತ್ತು ಭಂಗಾರದ ಬೆಲೆಯು ಕಮ್ಮಿಯಾಗಿರುತ್ತದೆ ಕಾರಣ — ಅಮೇರಿಕಾದವರು ಬೆಳ್ಳಿಯನ್ನು ಲೀಸ್ ಎಂಡ್ ಲೆಂಡ್ ಮೇಲೆ ಕೊಡುವದಾಗಿದೆ.

ಈ ವಾರ ಫ್ರೆಂಚ್ ಲವಾಲರು ಜರ್ಮನಿಗೆ ಹೇಗಿ, ಮುಂದೆ ಹೇಗೆ ಜರ್ಮನಿಗೆ ಸಹಾಯ ಮಾಡಬೇಕೆಂದು ಆಲೋಚಿಸುವರು.

ವರ್ತಮಾನ ಸಂಗ್ರಹ

ಅಮೇರಿಕಾ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ತಮ್ಮ ದೇಶದ ಪ್ರಸಿದ್ಧ 75 ಮಂದಿ ಸ್ತ್ರೀಯರು ಒಂದು ಸಂದೇಶವನ್ನು ಕಳುಹಿಸಿ ಅದರಲ್ಲಿ ಯಾವ ದೇಶದವರೂ ಇನ್ನೊಬ್ಬರ ಗುಲಾಮರಾಗಿರಕೂಡದು, ಎಲ್ಲರೂ ಅವರವರ ರಾಜ್ಯವನ್ನು ಅವರವರೇ ಸೋಡಿಕೊಳ್ಳಬೇಕು, ಹೀಗಿದ್ದರೆ ತಾನೇ ಪ್ರಪಂಚದ ಶಾಂತಿ ಎಂದು ಕಾಣಿಸಿರುವರು.

ಸರಾಸರಿ ಪ್ರತಿ ದಿನವೂ ಒಂದಕ್ಕೆ ಕಡಮೆ ಇಲ್ಲದೆ ಶತ್ರು ನೌಕೆಯು ನೀರಿನ ಪಾಲಾಗುತ್ತಿರುವುದು.

ವಿಷಿ ಸರಕಾರಕ್ಕೂ ದಕ್ಷಿಣ ಅಮೇರಿಕಾ ಸಂಸ್ಥಾನಗಳಿಗೂ ಇರುವ ಬಾಂಧವ್ಯತೆಯು ಕೊಸೆಗೊಂಡಿತು.

ಆಸ್ಟ್ರೇಲಿಯಾದಲ್ಲಿ ಸಾಲ ಎತ್ತಲು 150 ಕೋಟಿ ರೂಪಾಯಿ ಬಹು ಬೇಗನೆ ವಸೂಲಾಯಿತು.

ಆರ್. ಎ. ಎಫ್. ವಿಮಾನಗಳಲ್ಲಿ ಫೋಟೋ ತೆಗೆಯುವವರೂ ಇರುತ್ತಾರೆ. ಒಂಥಾ ಕತ್ತಲೆಯಲ್ಲಿಯೂ 8000 ಅಡಿಯಿಂದ ಫೋಟೋ ತೆಗೆಯಬಹುದು. ಏಕ ಕಾಲದಲ್ಲಿ 12 ಚಿತ್ರನೆಲ್ಲಿ ಸೋರೋ ತೆಗೆಯುತ್ತಾರೆ. ಇದನ್ನು ಅಮೇರಿಕಾ ವಿಮಾನದಳದ ಕರ್ನಲ್ ಜಾರ್ಜ್ ಗಾಡರ್ಡರು ಕಂಡು ಹಿಡಿದಿರುವರು. ಇದು ಬಹಳ ರಹಸ್ಯವಾಗಿ ಆರ್. ಎ. ಎಫ್. ಮತ್ತು ಅಮೆರಿಕಾ ವಿಮಾನದಳದವರಿಗೆ ಮಾತ್ರ ಗೊತ್ತು.

STOCKINGS

Socks, Sweaters, Jersey, Scarfs Lady-Shawls (wollen & Cotton) Badges, Crowns, Stars, Buckles, (brass & worsted) etc. available Sample V.P.P. Cheapest rates.

Baini Ram & Sons,
Ludhiana.

ಮಾತಾರಂಗ

ಇಂಡಿಯಾದಲ್ಲಿ ಕ್ಷಾಮ ತಲೆದೋರಿದೆ ಎಂದು ಹೇಳಲು ಯಾವ ತೊಡ್ಡಿಯೂ ಇಲ್ಲ. ಬಿಜಾಪುರ ಡಿಸ್ಟ್ರಿಕ್ಟ್ ನೋಡಿದರೆ ಭಯಂಕರವಾಗಿದೆ. ಪ್ಲೇಗು ಕಾಲರಾ ಉಪದ್ರವಗಳಿಂದ ಸಾವಿರಾರು ಜನರು ಸತ್ತರು. ತಿನ್ನುವುದಕ್ಕೆ ಆಹಾರವಿಲ್ಲ, ತೊಡುವುದಕ್ಕೆ ಬಟ್ಟೆಯಿಲ್ಲ. ಅಲ್ಲಿರುವ 5 ಲಕ್ಷ ಮುಂಬಿಗೆ ಬಟ್ಟೆ ಹಂಚಲು ಬೊಂಬಾಯಿ ಪ್ರಮುಖರು ಚಂದಾ ವಸೂಲ್ಮಾಡುತ್ತಿರುವರು.

ಇನ್ನು ಮುಂದೆ ಎ. ಆರ್. ಪಿ. ಇಲಾಖೆಯನ್ನು ಇಂಗ್ಲೆಂಡಿನಲ್ಲಿ ಖಾಯಂಯಾಗಿ ಮಾಡುವರಂತೆ.

ಇಂಡಿಯಾ ಚೈನಾ, ರಷ್ಯಾ ಈ ಮೂರು ರಾಜ್ಯದ ಪ್ರಜೆಯೇ ಪ್ರಪಂಚದ ಅರ್ಧ ಜನಾಂಗದವರು.

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಮೊಹಲ್ಲಾಗಳಲ್ಲೂ ಸತ್ಯವಾದಿ ಪತ್ರಿಕೆಯನ್ನು ಮಾರಲೂ ಮತ್ತು ಚಂದಾದಾರರಿಗೆ ಪತ್ರಿಕೆ ಹಂಚಲೂ ಹುಡುಗರು ಬೇಕಾಗಿದ್ದಾರೆ. ಹೆಚ್ಚು ವಿಷಯಗಳನ್ನು ಆಫೀಸಿನಲ್ಲಿ ವಿಚಾರಿಸಿ ತಿಳಿಯಬಹುದು.

ಉತ್ತಮ ಕಾಫೀ

ಸುವಾಸನೆ! ಅತ್ಯಂತ ರುಚಿ!

ಯಾವಾಗಲೂ ಲಕ್ಷ್ಮಿನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮಿನಾರಾಯಣ ಕಾಫೀವರ್ಕ್ಸ್!

ಕೊಳ್ಳೇಗಾಲ

ಅಪೆರ .... ಮಾಯಾಜ್ಯೋತಿ

Edited, Printed & published by M. S. Krishna Rao, at the Satyavadi Press, Chamaraja Agrahar, Mysore.